ಅ) ಚಿಕ್ಕಮಗಳೂರಿಂ ಪ್ರಾದೇಶಿಕ ಸಾರಿಗೆ ಇಲಾಖೆಗೆ ಕಟ್ಟಡವನ್ನು ನಿರ್ಮಿಸಲು ನಿರ್ದೇಶನದ ಮಂಜೂರಾತಿಯ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಕೆಲಸವು ಪ್ರಾರಂಭವಾಗದಿರಲು ಕಾರಣವೇನು ?

ಶ್ರೀ ವೀರಣ್ಣ (ಸಾರಿಗೆ ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು).—

ಅ) ಹೌದು.

ಆ) ೧೯೮೬–೮೭ನೇ ಸಾಲಿನ ಬಜೆಟ್‌ನಲ್ಲಿ ಸೇರದೇ ಇರುವುದರಿಂದ ಕೆಲಸ ಪ್ರಾರಂಭಿಸಲಾಗಿಲ್ಲ.

ಚಿಕ್ಕಮಂಗಳೂರಿನಲ್ಲಿ ನವೀನ ಮಾದರಿ ಆಸ್ಪತ್ರೆ ನಿರ್ಮಾಣದ ಬಗ್ಗೆ

೬೧೩ ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಆರೋಗ್ಯ ಮಂತ್ರಿ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

೧) ಚಿಕ್ಕಮಂಗಳೂರಿನಲ್ಲಿ ಆಧುನಿಕ ಆಸ್ಪತ್ರೆಯನ್ನು ಮೂರು ವರ್ಷದೊಳಗೆ ಕಟ್ಟಿಸಿಕೊಡುವ ಭರವಸೆಯನ್ನು ಪ್ರಾರಂಭದ ಅಧಿವೇಶನದಲ್ಲಿ ಹೇಳಿರುವುದು ಸರ್ಕಾರದವರ ಗಮನದಲ್ಲಿ ಇದೆಯೇ ?

೨) ಹಾಗಿದ್ದಲ್ಲಿ, ಇದುವರೆವಿಗೂ ನಿರ್ಮಾಣವನ್ನು ಪ್ರಾರಂಭಿಸದಿರಲು ಕಾರಣವೇನು ?

೩) ಯಾವಾಗ ಪ್ರಾರಂಭಿಸಲಾಗುವುದು ?

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಅಬಕಾರಿ ಮಂತ್ರಿಗಳು).—

೧) ಇಂತಿಷ್ಟೇ ಕಾಲಮಿತಿಯೊಳಗೆ ಕಟ್ಟಿಸಿಕೊಡಲಾಗುವುದೆಂದು ಹೇಳಿಲ್ಲ.

೨) ನಕ್ಷೆಯ ಪ್ರಕಾರ ನೂತನ ಕಟ್ಟಡ ಕಟ್ಟಲು ಹಾಲಿ ಇರುವ ಚಿಕ್ಕಮಂಗಳೂರು ಜಿಲ್ಲಾಧಿಕಾರಿಯವರ ವಸತಿ ಗೃಹ ಉರುಳಿಸಬೇಕಾಗುತ್ತದೆ. ಜಿಲ್ಲಾಧಿಕಾರಿಯವರಿಗೆ ಬೇರೆ ವಸತಿ ಗೃಹವನ್ನು ಇನ್ನೂ ಒದಗಿಸಿಲ್ಲದ ಕಾರಣ, ಆ ಕಟ್ಟಡವನ್ನು ಕೆಡವಿ ಆಸ್ಪತ್ರೆ ನಿರ್ಮಾಣ ಕೈಗೊಳ್ಳಲು ಸಾಧ್ಯವಾಗಿಲ್ಲ.

೩) ಜಿಲ್ಲಾಧಿಕಾರಿಯವರಿಗೆ ಬೇರೆ ವಸತಿ ಗೃಹ ಒದಗಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಆ ನಂತರ ನಕ್ಷೆಯ ಪ್ರಕಾರ ಆಸ್ಪತ್ರೆ ನಿರ್ಮಾಣವನ್ನು ಕೈಗೆತ್ತಿಕೊಳ್ಳಲಾಗುವುದು.

ಚಿಕ್ಕಮಂಗಳೂರಿಂ ಸರ್ಕಾರಿ ಆಸ್ಪತ್ರೆಗೆ ಜನರೇಟರ್ ಅಳವಡಿಸುವ ಬಗ್ಗೆ

೬೧೪ ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).— ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕಮಂಗಳೂರು ಸಾರ್ವತ್ರಿಕ ಆಸ್ಪತ್ರೆಯಲ್ಲಿ ಮೇಲಿಂದ ಮೇಲೆ ವಿದ್ಯುಚ್ಛಕ್ತಿಯ ಕಡಿತದಿಂದಾಗಿ ಶಸ್ತ್ರ ಚಿಕಿತ್ಸೆಗೂ ಮತ್ತು ರೋಗಿಗಳಿಗೂ ಆಗುತ್ತಿರುವ ತೊಂದರೆ ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಈ ಕಡಿತವನ್ನು ನಿವಾರಿಸಲು ಮತ್ತು ಆಸ್ಪತ್ರೆಗೆ ಜನರೇಟರನ್ನು ಅಳವಡಿಸಲಂ ಸರ್ಕಾರದವರಂ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವರೇ,

ಶ್ರೀ ಹೆಚ್.ಟಿ. ಕೃಷ್ಣಪ್ಪ (ಆರೋಗ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಜನರೇಟರನ್ನು ಒದಗಿಸಲು ಪರಿಶೀಲಿಸಲಾಗುತ್ತಿದೆ.